## ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು-12

## ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರ ನಡವಳಿಗಳು

ವಿಷಯ: ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜು, ಬೀದರ್, ಈ ಕಾಲೇಜಿನ ಮಾನ್ಯತೆ ಮತ್ತು ಮಂಜೂರಾತಿ ಆದೇಶವನ್ನು ರದ್ದುಪಡಿಸಿ, ವೇತನ ಅನುದಾನವನ್ನು ಶಾಶ್ವತವಾಗಿ ರದ್ದುಪಡಿಸಿರುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 175 ಡಿಪಿಡಬ್ಲ್ಯು 2010 ದಿನಾಂಕ: 02-07-2011.

* * * * *

**ಪ್ರಸ್ತಾವನೆ:-**

ಸರ್ಕಾರವು ಉಲ್ಲೇಖಿತ ಆದೇಶದಲ್ಲಿ ಬೀದರ್‌ನ ಗವಾನ್ ಶಿಕ್ಷಣ ಟ್ರಸ್ಟ್ ವತಿಯಿಂದ ಬೀದರ್‌ನಲ್ಲಿ ನಡೆಯುತ್ತಿದ್ದ ಎ.ಐ.ಎಂ.ಇ.ಎಸ್. ಅನುದಾನಿತ ಪದವಿ ಪೂರ್ವ ಕಾಲೇಜಿನ ಮಾನ್ಯತೆ ಮತ್ತು ಮಂಜೂರಾತಿಯನ್ನು ರದ್ದುಪಡಿಸಿ ವೇತನಾನುದಾನವನ್ನು ಶಾಶ್ವತವಾಗಿ ರದ್ದುಪಡಿಸಿದೆ ಮತ್ತು ಸದರಿ ಕಾಲೇಜಿನ ಅರ್ಹ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಹೆಚ್ಚುವರಿ ಎಂದು ಪರಿಗಣಿಸಿ ಇತರೆ ಅನುದಾನಿತ ಪದವಿ ಪೂರ್ವ ಕಾಲೇಜಿನ ಹುದ್ದೆಗಳಿಗೆ ಸ್ಥಳಾಂತರಿಸಲು ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಆದೇಶಿಸಿದೆ.

ಸರ್ಕಾರವು ಈ ಕಾಲೇಜಿನ ಮಾನ್ಯತೆ ಮತ್ತು ಮಂಜೂರಾತಿಯನ್ನು ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಸದರಿ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯಿಸಿ ಈ ಪದವಿ ಪೂರ್ವ ಕಾಲೇಜು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ. ಈ ಕಾರಣಗಳಿಂದ ಈ ಪದವಿ ಪೂರ್ವ ಕಾಲೇಜಿನಲ್ಲಿ 2011-12ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ತರಗತಿಗಳಿಗೆ ದಾಖಲಾಗಿರಬಹುದಾದ ಅರ್ಹ ಮತ್ತು ನೈಜ ವಿದ್ಯಾರ್ಥಿಗಳನ್ನು ಹತ್ತಿರದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸಬೇಕಾಗುತ್ತದೆ. ಹಾಗೆಯೇ ಈ ಪದವಿ ಪೂರ್ವ ಕಾಲೇಜಿನ ವೇತನಾನುದಾನವನ್ನು ಶಾಶ್ವತವಾಗಿ ರದ್ದುಪಡಿಸಿರುವುದರಿಂದ ಮತ್ತು ಸರ್ಕಾರದ ನಿರ್ದೇಶನದಂತೆ ಸದರಿ ಪದವಿ ಪೂರ್ವ ಕಾಲೇಜಿನ ಅರ್ಹ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರನ್ನು ಇತರ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಅನುದಾನಿತ ಹುದ್ದೆಗಳಿಗೆ ಸ್ಥಳಾಂತರಿಸಬೇಕಾಗುತ್ತದೆ.

ಈ ಪದವಿ ಪೂರ್ವ ಕಾಲೇಜಿನ ಮಾನ್ಯತೆ ಮತ್ತು ಮಂಜೂರಾತಿಯನ್ನು ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಈ ಪದವಿ ಪೂರ್ವ ಕಾಲೇಜು ತನ್ನ ಅಸ್ತಿತ್ವವನ್ನು ಕಳೆದುಕೊಂಡಿರುವುದರಿಂದ ಈ ಪದವಿ ಪೂರ್ವ ಕಾಲೇಜಿನಲ್ಲಿ ಇದುವರೆವಿಗೂ ದಾಖಲಾಗಿ ವ್ಯಾಸಂಗ ಮಾಡಿ ಉತ್ತೀರ್ಣ/ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮತ್ತು ಕಾಲೇಜು ಪ್ರಾರಂಭದಿಂದ ಇಲ್ಲಿಯವರೆಗಿನ ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಲೆಕ್ಕಪತ್ರಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಬೇರೊಂದು ಪದವಿ ಪೂರ್ವ ಕಾಲೇಜಿನ ವಶಕ್ಕೆ ಒಪ್ಪಿಸುವುದು ಸೂಕ್ತವಾಗಿದೆ.

.2.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೀದರ್‌ನ ಗವಾನ್ ಶಿಕ್ಷಣ ಟ್ರಸ್ಟ್‌ನ ವತಿಯಿಂದ ನಡೆಯುತ್ತಿರುವ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ(ಎಫ್‌ಎಫ್-016) 2011-12ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರಬಹುದಾದ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳನ್ನು ಬೇರೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸಲು ಈ ಪದವಿ ಪೂರ್ವ ಕಾಲೇಜಿನ ಎಲ್ಲಾ ದಾಖಲಾತಿಗಳನ್ನು ಬೇರೆ ಪದವಿ ಪೂರ್ವ ಕಾಲೇಜಿಗೆ ಹಸ್ತಾಂತರಿಸಲು ಮತ್ತು ಕಾಲೇಜಿನ ಅನುದಾನಿತ ಅರ್ಹ ಸಿಬ್ಬಂದಿಯವರನ್ನು ಬೇರೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ: ಪಪೂಶಿಇ:ಮಾನ್ಯತೆ-3/ಎಫ್‌ಎಫ್-016/2009-10 ದಿನಾಂಕ:11-07-2011**

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ 2011-12ನೇ ಸಾಲಿನಲ್ಲಿ ದಾಖಲಾಗಿರಬಹುದಾದ ಅರ್ಹ ಮತ್ತು ನೈಜ ವಿದ್ಯಾರ್ಥಿಗಳನ್ನು ಗುರುತಿಸಿ ಅಂತಹ ವಿದ್ಯಾರ್ಥಿಗಳಲ್ಲಿ ಬಾಲಕರನ್ನು ಬೀದರ್‌ನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೂ(ಎಫ್‌ಎಫ್-011) ಮತ್ತು ಬಾಲಕಿಯರನ್ನು ಬೀದರ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೂ(ಎಫ್‌ಎಫ್-012) ಸ್ಥಳಾಂತರಿಸಿ ಆದೇಶಿಸಿದೆ. ಈ ಪ್ರಕ್ರಿಯೆಯನ್ನು ದಿನಾಂಕ: 12-07-2011ರೊಳಗಾಗಿ ಪೂರ್ಣಗೊಳಿಸತಕ್ಕದ್ದು.
2. ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜು ಪ್ರಾರಂಭಗೊಂಡ ದಿನಾಂಕದಿಂದ ಇಲ್ಲಿಯವರೆಗಿನ ಕಾಲೇಜಿಗೆ ಸಂಬಂಧಿಸಿದ ಆಡಳಿತಾತ್ಮಕ, ಶೈಕ್ಷಣಿಕ ಮತ್ತು ಲೆಕ್ಕಪತ್ರಗಳ ಎಲ್ಲಾ ಮೂಲ ದಾಖಲಾತಿಗಳನ್ನು ಪಟ್ಟಿ ಮಾಡಿ ದಿನಾಂಕ:16-07-2011ರೊಳಗಾಗಿ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀದರ್(ಎಫ್‌ಎಫ್-011) ಈ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಹಸ್ತಾಂತರಿಸಲು ಆದೇಶಿಸಿದೆ.
3. ಈ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿ, ಕಾಲೇಜಿಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳನ್ನು ಸೂಚಿಸಿದ ಕಾಲೇಜಿನ ವಶಕ್ಕೆ ಹಸ್ತಾಂತರಿಸಿದ ನಂತರ ಈ ಪದವಿ ಪೂರ್ವ ಕಾಲೇಜಿನ ಅರ್ಹ ಅನುದಾನಿತ ಸಿಬ್ಬಂದಿಯನ್ನು ಬೇರೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸುವ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಆದೇಶಿಸಿದೆ.
4. ಕಾಲೇಜಿನ ಅನುದಾನಿತ ಸಿಬ್ಬಂದಿಯವರನ್ನು ಬೇರೆ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸಲು ನಿಗದಿತ ಕಾರ್ಯಭಾರ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
5. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೀದರ್ ಜಿಲ್ಲೆ, ಇವರು ಈ ಪ್ರಕ್ರಿಯೆಯ ಮೇಲುಸ್ತುವಾರಿ ವಹಿಸಿ, ಕ್ರಮ ವಹಿಸಿದ ಬಗ್ಗೆ ದಿನಾಂಕ: 16.07.2011ರೊಳಗಾಗಿ ವರದಿ ಮಾಡಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು:

1. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೀದರ್- ಈ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ಮತ್ತು ಕಾಲೇಜಿನ ದಾಖಲೆಗಳನ್ನು, ಕಾಲೇಜಿನ ಪ್ರಾಚಾರ್ಯರು ನಿಗಧಿತ ದಿನಾಂಕಗಳೊಳಗೆ ಸೂಚಿಸಿರುವ ಕಾಲೇಜುಗಳಿಗೆ ಹಸ್ತಾಂತರಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.
2. ಚೇರ್‌ಮನ್, ಗವಾನ್ ಎಜುಕೇಷನಲ್ ಟ್ರಸ್ಟ್, ನಂ. 9-2-64, ಶಹಗಂಜ್, ಬೀದರ್, 585401- ಇವರಿಗೆ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ಮತ್ತು ದಾಖಲಾತಿಗಳನ್ನು ಸೂಚಿಸಿರುವ ಕಾಲೇಜಿಗೆ ಹಸ್ತಾಂತರಿಸುವಂತೆ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಸೂಕ್ತ ನಿರ್ದೇಶನ ನೀಡುವಂತೆ ತಿಳಿಸಿದೆ.
3. ಪ್ರಾಚಾರ್ಯರು, ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜು, ಬೀದರ್-ಇವರಿಗೆ ಈ ಪದವಿ ಪೂರ್ವ ಕಾಲೇಜಿನಲ್ಲಿ 2011-12ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರಬಹುದಾದ ವಿದ್ಯಾರ್ಥಿಗಳನ್ನು ಸೂಚಿಸಿರುವ ಕಾಲೇಜುಗಳಿಗೆ ಮತ್ತು ಕಾಲೇಜಿನ ಎಲ್ಲಾ ಮೂಲ ದಾಖಲಾತಿಗಳನ್ನು ಸೂಚಿಸಿರುವ ಕಾಲೇಜಿನ ವಶಕ್ಕೆ ಹಸ್ತಾಂತರಿಸುವಂತೆ ಸೂಚಿಸಿದೆ. ಈ ಕ್ರಮ ಜರುಗಿಸಿದ ನಂತರ ಕಾಲೇಜಿನ ಅರ್ಹ ಅನುದಾನಿತ ಸಿಬ್ಬಂದಿಯವರನ್ನು ಬೇರೆ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಸ್ಥಳಾಂತರಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸುವಂತೆ ಸೂಚಿಸಿದೆ.
4. ಪ್ರಾಚಾರ್ಯರು, ಬಾಲಕರ ಪದವಿ ಪೂರ್ವ ಕಾಲೇಜು, ಬೀದರ್(ಎಫ್‌ಎಫ್-011)- ಇವರಿಗೆ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನ 2011-12ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರಬಹುದಾದ ನೈಜ ಬಾಲಕರನ್ನು ನಿಮ್ಮ ಪದವಿ ಪೂರ್ವ ಕಾಲೇಜಿಗೆ ದಾಖಲಾತಿ ಮಾಡಿಕೊಳ್ಳುವುದು ಮತ್ತು ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿಗೆ ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳನ್ನು ಸದರಿ ಕಾಲೇಜಿನ ಪ್ರಾಚಾರ್ಯರಿಂದ ಪಡೆದು ಪ್ರತ್ಯೇಕವಾಗಿ ಕಾಯ್ದಿರಿಸಲು ಸೂಚಿಸಿದೆ.
5. ಪ್ರಾಚಾರ್ಯರು, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಬೀದರ್(ಎಫ್‌ಎಫ್-012) ಇವರಿಗೆ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜಿನಲ್ಲಿ 2011-12ನೇ ಶೈಕ್ಷಣಿಕ ಸಾಲಿನಲ್ಲಿ ದಾಖಲಾಗಿರಬಹುದಾದ ಬಾಲಕಿಯರನ್ನು ನಿಮ್ಮ ಪದವಿ ಪೂರ್ವ ಕಾಲೇಜಿಗೆ ದಾಖಲಾತಿ ಮಾಡಿಕೊಳ್ಳುವುದು.
6. ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜು, ಬೀದರ್-ಈ ಕಾಲೇಜಿನ ಎಲ್ಲಾ ಸಿಬ್ಬಂದಿಯವರಿಗೆ ಪ್ರಾಚಾರ್ಯರ ಮೂಲಕ.
7. ಪ್ರತಿಯನ್ನು ಮಾಹಿತಿಗಾಗಿ-ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಹೆಚ್ಚುವರಿ ಪ್ರತಿ/ ಕಛೇರಿ ಪ್ರತಿ.

ಸ್ವೀಕೃತಿ ದಿನಾಂಕ......11/7/11..........

ರವಾನಿಸಿದ ದಿನಾಂಕ..........................

ಕ್ರಮ ಸಂಖ್ಯೆ.................1230...............

XXX

ಸರ್ಕಾರದ ಆದೇಶದಂತೆ ಕೂಡಲೇ ಪಾಲನೆ ಸಲ್ಲಿಸಿ.

<u>ಕರ್ನಾಟಕ ಸರ್ಕಾರದ ನಡವಳಿಗಳು</u>

06/07/11 (JD-A) (DD-R)

ವಿಷಯ:- ಬೀದರ್‌ನ ಗವಾನ್ ಎಜುಕೇಷನಲ್ ಟ್ರಸ್ಟ್‌ನ ವತಿಯಿಂದ ನಡೆಯುತ್ತಿರುವ ಎ.ಐ.ಎಂ.ಇ.ಎಸ್. ಪದವಿ ಪೂರ್ವ ಕಾಲೇಜು, ಬೀದರ್ ಈ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಮಾನ್ಯತೆಯನ್ನು ಮುಂದುವರೆಸುವ ಮತ್ತು ಅನುದಾನಿತ ನೌಕರರಿಗೆ ತಡೆ ಹಿಡಿದಿರುವ ವೇತನವನ್ನು ಬಿಡುಗಡೆ ಮಾಡಿ ಮುಂದುವರೆಸುವ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಮರುಪರಿಶೀಲಿಸುವ ಬಗ್ಗೆ

ಓದಲಾಗಿದೆ:-

1. ಸರ್ಕಾರದ ಆದೇಶ ಸಂ.ಇಡಿ 96 ಟಿಪಿಯು 80 ದಿನಾಂಕ 11-11-1980.
2. ಸರ್ಕಾರದ ಆದೇಶ ಸಂ.ಇಡಿ 81 ಟಿಪಿಯು 86 ದಿನಾಂಕ 24--09-1986.
3. ಸರ್ಕಾರದ ಆದೇಶ ಸಂ.ಇಡಿ 180 ಎಸ್ಒಹೆಚ್ 2004 ದಿನಾಂಕ 06-12-2004.
4. ಸರ್ಕಾರದ ಆದೇಶ ಸಂ.ಇಡಿ 32 ಎಸ್ಒಹೆಚ್ 2008 ದಿನಾಂಕ 23-08-2008.
5. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಪತ್ರ ಸಂ.ಪಪೂಶಿಇ/ ಮಾನ್ಯತೆ/ಎಫ್ಎಫ್-016/1981-82/2009-10 ದಿನಾಂಕ 15-05-2009.
6. ಸರ್ಕಾರದ ಆದೇಶ ಸಂ.ಇಡಿ 432 ಎಸ್‌ಹೆಚ್‌ಹೆಚ್ 2009 ದಿನಾಂಕ 01-10-2009.
7. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ.83378/2009ರ ಮೇಲೆ ದಿನಾಂಕ 20-4-2010ರಂದು ನೀಡಿರುವ ಆದೇಶ.
8. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂ.10140/2010ರ ಮೇಲೆ ದಿನಾಂಕ 20-9-2010ರಂದು ನೀಡಿರುವ ಆದೇಶ.
9. ಸರ್ಕಾರದ ಪತ್ರ ಸಂ.ಇಡಿ 175 ಡಿಜಿಡಬ್ಲ್ಯೂ 2010 ದಿನಾಂಕ 20-12-2010.
10. ನಿರ್ದೇಶಕರು, ಪಪೂಶಿಇ ಇವರು ಸಂಸ್ಥೆಯ ಅಧ್ಯಕ್ಷರಿಗೆ ನೀಡಿರುವ ಸೂಚನಾ ಪತ್ರ ಸಂ.ಪಪೂಶಿಇ/ಮಾನ್ಯತೆ/ಗು.ವಿ./ಎಫ್ಎಫ್-016/2009-10 ದಿನಾಂಕ 21-01-2011.
11. ನಿರ್ದೇಶಕರು, ಪಪೂಶಿಇ ಇವರ ಪತ್ರ ಸಂ.ಪಪೂಶಿಇ/ಮಾನ್ಯತೆ/ಗು.ವಿ./ಎಫ್ಎಫ್-016/2009-10 ದಿನಾಂಕ 07-03-2011.
12. ಸರ್ಕಾರವು ಸಂಸ್ಥೆಯ ಅಧ್ಯಕ್ಷರಿಗೆ ಕರ್ನಾಟಕ ಶಿಕ್ಷಣ ಕಾಯ್ದೆಯ ಕಲಂ 53ರಡಿ ನೀಡಿರುವ ಕಾರಣ ಕೇಳುವ ಸೂಚನಾ ಪತ್ರ ಸಂ.ಇಡಿ 175 ಡಿಜಿಡಬ್ಲ್ಯೂ 2010 ದಿನಾಂಕ 08-04-2011.
13. ಗವಾನ್ ಎಜುಕೇಷನಲ್ ಟ್ರಸ್ಟ್, ಬೀದರ್ ಈ ಸಂಸ್ಥೆಯ ಅಧ್ಯಕ್ಷರ ಪತ್ರ ಸಂ.ಜಿಇಟಿ/ ಎಐಎಂಇಎಸ್/ಪಿಯುಸಿ/ಬಿಡಿಆರ್/ಜಿಐಎ/2010-11 ದಿನಾಂಕ 30-3-2011/5-4-2011
14. ನಿರ್ದೇಶಕರು, ಪಪೂಶಿಇ ಇವರ ಸಂ.ಪಪೂಶಿಇ/ಮಾನ್ಯತೆ/ಗು.ವಿ./ಎಫ್ಎಫ್-016/2009-10 ದಿನಾಂಕ 22-03-2011.
15. ಗವಾನ್ ಎಜುಕೇಷನಲ್ ಟ್ರಸ್ಟ್, ಬೀದರ್ ಈ ಸಂಸ್ಥೆಯ ಅಧ್ಯಕ್ಷರ ಮನವಿ ದಿನಾಂಕ 21-03-2011.

DA-5402

ಮುಂದುವರೆದಿದೆ

10/7/11 5:20pm

16. ಗವಾನ್ ಎಜುಕೇಷನಲ್ ಟ್ರಸ್ಟ್, ಬೀದರ್ ಈ ಸಂಸ್ಥೆಯ ಅಧ್ಯಕ್ಷರ ಮನವಿ ದಿನಾಂಕ 28-04-2011.

ಪ್ರಸ್ತಾವನೆ:-

ಅಖಿಲ ಭಾರತ ಮುಸ್ಲಿಮ್ ಶಿಕ್ಷಣ ಸಂಸ್ಥೆ, ಬೀದರ್ ಇವರಿಗೆ 1980-81ನೇ ಶೈಕ್ಷಣಿಕ ವರ್ಷದಿಂದ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುಮತಿ ನೀಡಲಾಗಿದೆ. ಈ ಪದವಿ ಪೂರ್ವ ಕಾಲೇಜಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶೈಕ್ಷಣಿಕ ಮಾನ್ಯತೆ ನೀಡಿದ್ದು, ಶೈಕ್ಷಣಿಕ ಮಾನ್ಯತೆ ನೀಡಿರುವ ಆದೇಶದಲ್ಲಿ ಈ ಪದವಿ ಪೂರ್ವ ಕಾಲೇಜಿಗೆ ಸ್ವತಂತ್ರ ಕಟ್ಟಡವನ್ನು ಹೊಂದುವಂತೆ, ಪ್ರತಿಯೊಂದು ಸಂಯೋಜನೆಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳಿರುವಂತೆ ಮತ್ತು ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿಗಳನ್ವಯ ಮೂಲಭೂತ ಸೌಲಭ್ಯಗಳನ್ನು ಮತ್ತು ಗ್ರಂಥಾಲಯವನ್ನು ಹೊಂದುವಂತೆ ಷರತ್ತು ವಿಧಿಸಲಾಗಿತ್ತು. ಸರ್ಕಾರವು ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ಈ ಪದವಿ ಪೂರ್ವ ಕಾಲೇಜನ್ನು1986-87ನೇ ಶೈಕ್ಷಣಿಕ ವರ್ಷದಿಂದ ವೇತನ ಅನುದಾನಕ್ಕೆ ಒಳಪಡಿಸಲು ಅನುಮೋದನೆ ನೀಡಿದೆ. ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಈ ಸಂಸ್ಥೆಯನ್ನು ಗವಾನ್ ಶಿಕ್ಷಣ ಟ್ರಸ್ಟ್, ಬೀದರ್ ಇವರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ತಮ್ಮ ಪತ್ರ ದಿನಾಂಕ 01-09-2006ರಲ್ಲಿ ಸದರಿ ಸಂಸ್ಥೆಯು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಳ್ಳಲು ವಿಫಲವಾಗಿರುವುದರಿಂದ, ಸರ್ಕಾರದ ಆದೇಶ ಸಂ.ಇಡಿ 29 ಯುಡಿಸಿ 71 ದಿನಾಂಕ 28-04-1971ರನ್ವಯ ಕಟ್ಟಡ ಮತ್ತು ಇತರ ಮೂಲಭೂತ ಸೌಲಭ್ಯಗಳನ್ನು ಕಡ್ಡಾಯವಾಗಿ 31-03-2007ರ ಒಳಗಾಗಿ ಒದಗಿಸಿಕೊಳ್ಳತಕ್ಕದ್ದೆಂಬ ಷರತ್ತಿಗೊಳಪಟ್ಟು ಸದರಿ ಕಾಲೇಜಿನ ಸಿಬ್ಬಂದಿ ವರ್ಗದವರ ವೇತನ ಅನುದಾನವನ್ನು 1-4-2006 ರಿಂದ 31-03-2007ರವರೆಗಿನ ಅವಧಿಗೆ ಬಿಡುಗಡೆಗೊಳಿಸಿ, ಸದರಿ ಅವಧಿಯಲ್ಲಿ ಕಟ್ಟಡವನ್ನು ಪೂರ್ಣಗೊಳಿಸದಿದ್ದಲ್ಲಿ ಯಾವುದೇ ಕಾರಣಕ್ಕೂ ವೇತನಾನುದಾನವನ್ನು ಬಿಡುಗಡೆಗೊಳಿಸುವುದಿಲ್ಲವೆಂದು ಸೂಚನೆ ನೀಡಿದ್ದರು.

ಸದರಿ ಸಂಸ್ಥೆಯು ಕಟ್ಟಡ ಮತ್ತು ಮೂಲಸೌಲಭ್ಯಗಳನ್ನು ಉತ್ತಮಪಡಿಸಿಕೊಳ್ಳದ ಕಾರಣ ಈ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಮಾನ್ಯತೆಯನ್ನು ಹಿಂಪಡೆದು ಕಾಲೇಜು ಪ್ರಾರಂಭಿಸಲು

ಮುಂದುವರೆದಿದೆ

ನೀಡಿರುವ ಮಂಜೂರಾತಿ ಆದೇಶವನ್ನು ರದ್ದುಪಡಿಸಲು ದಿನಾಂಕ 28–03–2008ರ ಪತ್ರದಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಈ ಕ್ರಮವನ್ನು ಪ್ರಶ್ನಿಸಿ ಸದರಿ ಸಂಸ್ಥೆಯು ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಇವರ ಪ್ರಾಧಿಕಾರದ ಮುಂದೆ ಶಿಕ್ಷಣ ಕಾಯ್ದೆಯ ಕಲಂ 130ರಡಿ ಮೇಲ್ಮನವಿ ಸಲ್ಲಿಸಿದ್ದರು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಸ್ತಾವನೆಯ ಸಂಬಂಧದಲ್ಲಿ ಸರ್ಕಾರವು ಸದರಿ ಶಿಕ್ಷಣ ಸಂಸ್ಥೆಗೆ 7–7–2008ರಂದು ಕಾರಣ ಕೇಳುವ ಸೂಚನಾ ಪತ್ರ ಜಾರಿಗೊಳಿಸಿತ್ತು. ಸದರಿ ಸಂಸ್ಥೆಯ ಅಧ್ಯಕ್ಷರು ದಿನಾಂಕ 30–7–2008ರಂದು ಸಲ್ಲಿಸಿರುವ ಉತ್ತರದಲ್ಲಿ, ಸಂಸ್ಥೆಯು ಕಾಲೇಜಿನ ಕಟ್ಟಡ ನಿರ್ಮಿಸಲು ನಿವೇಶನ ಖರೀದಿಸಿದ್ದು, ಕಟ್ಟಡ ನಿರ್ಮಿಸಲು 2 ರಿಂದ 3 ಕೋಟಿ ರೂ.ಗಳ ವೆಚ್ಚ ತಗಲುವುದರಿಂದ ಸಂಸ್ಥೆಯು ಹಲವಾರು ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಿಸಲು ಕ್ರಮಕೈಗೊಂಡಿದ್ದು, ಕಟ್ಟಡ ನಿರ್ಮಿಸಲು ಎರಡು ವರ್ಷಗಳ ಕಾಲಾವಕಾಶ ನೀಡುವಂತೆ ಕೋರಿದ್ದರು. ಸಂಸ್ಥೆಯ ಮನವಿಯನ್ನು ಪರಿಗಣಿಸಿ, ಮೇಲೆ (4) ಓದಲಾದ ಸರ್ಕಾರದ ಆದೇಶದಲ್ಲಿ ಸದರಿ ಸಂಸ್ಥೆಯ ಪದವಿ ಪೂರ್ವ ಕಾಲೇಜಿನ ಮಾನ್ಯತೆಯನ್ನು ಮುಂದುವರೆಸಲು ಮಂಜೂರಾತಿ ನೀಡಿ, ಸಂಸ್ಥೆಯು ಕಾಲೇಜಿಗೆ ಅಗತ್ಯವಾದ ಕಟ್ಟಡ ಮತ್ತು ಮೂಲಸೌಲಭ್ಯಗಳನ್ನು ಎರಡು ವರ್ಷಗಳ ಒಳಗೆ ಒದಗಿಸಿಕೊಳ್ಳತಕ್ಕದ್ದೆಂದು ಸೂಚಿಸಲಾಗಿತ್ತು. ಮೇಲೆ (4)ರಲ್ಲಿ ಓದಲಾದ ಆದೇಶದ ಹಿನ್ನೆಲೆಯಲ್ಲಿ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಇವರ ಪ್ರಾಧಿಕಾರವು, ಅಪೀಲು ಸಂ.30/2008(ಇಡಿ 95 ಎಸ್‌ಒಹೆಚ್ 2008)ನ್ನು ದಿನಾಂಕ 26–11–2008ರಂದು ಇತ್ಯರ್ಥಗೊಳಿಸಿದೆ.

ಈ ಪದವಿ ಪೂರ್ವ ಕಾಲೇಜಿನ ಮಾನ್ಯತೆಯನ್ನು ಸರ್ಕಾರವು ಮುಂದುವರೆಸಿರುವ ಹಿನ್ನೆಲೆಯಲ್ಲಿ, ಈ ಕಾಲೇಜಿನ ಸಿಬ್ಬಂದಿಯ ತಡೆಹಿಡಿಯಲಾದ ವೇತನಾನುದಾನವನ್ನು ಬಿಡುಗಡೆಗೊಳಿಸುವಂತೆ ಸಂಸ್ಥೆಯ ಅಧ್ಯಕ್ಷರು ದಿನಾಂಕ 13–09–2008ರಂದು ಕೋರಿದ್ದರು. ಇವರ ಮನವಿಯನ್ನು ಪರಿಶೀಲಿಸಿ, ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು, ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ, ಕಾಲೇಜಿನ ಬಹಳಷ್ಟು ಸಿಬ್ಬಂದಿಯ ವೇತನವನ್ನು ಅನುದಾನಕ್ಕೆ ಒಳಪಟ್ಟ ದಿನಾಂಕದಿಂದ ನಿಗದಿಪಡಿಸುವ ಬದಲಾಗಿ ನೇಮಕಗೊಂಡ ದಿನಾಂಕದಿಂದ ನಿಗದಿಪಡಿಸಲಾಗಿದೆ, ಇದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣವಾಗಿದೆ. ಹಾಗೂ ಸದರಿ ಕಾಲೇಜಿನ 1997–2008ರವರೆಗಿನ ಫಲಿತಾಂಶವನ್ನು ಗಮನಿಸಲಾಗಿ ಅತ್ಯಂತ ಕಡಿಮೆ ಇದೆ,

ಮುಂದುವರೆದಿದೆ

ಪರೀಕ್ಷೆಗೆ ನೊಂದಾಯಿಸಿದ ಬಹಳಷ್ಟು ವಿದ್ಯಾರ್ಥಿಗಳು ಎಲ್ಲಾ ವಿಷಯಗಳ ಪರೀಕ್ಷೆಗೆ ಗೈರುಹಾಜರಾಗಿರುತ್ತಾರೆ. ಈ ರೀತಿ ಗೈರು ಹಾಜರಾದ ವಿದ್ಯಾರ್ಥಿಗಳೆಲ್ಲರೂ ಕೇವಲ ಅಂಕಿ–ಅಂಶ ತೋರಿಸುವ ಉದ್ದೇಶದಿಂದ/ಕಾಲೇಜು ನಡೆಯುತ್ತಿದೆ ಎಂದು ತೋರಿಸುವ ಉದ್ದೇಶದಿಂದ, ಸರ್ಕಾರದಿಂದ ದೊರೆಯುವ ಬೇರೆ ಬೇರೆ ಆರ್ಥಿಕ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ವಂಚನೆಯಿಂದ ಸೇರ್ಪಡೆಯಾದ ನಕಲಿ ಹೆಸರುಗಳೇ ವಿನ: ನಿಜವಾದ ವಿದ್ಯಾರ್ಥಿಗಳಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆಂದು ವರದಿ ಮಾಡಿದ್ದು, ಈ ಕಾಲೇಜಿನ ಕಳೆದ ನಾಲ್ಕು ವರ್ಷಗಳ ದ್ವಿತೀಯ ಪಿ.ಯು.ಸಿ ಸಂಯೋಜನೆವಾರು ಫಲಿತಾಂಶವನ್ನು ಗಮನಿಸಲಾಗಿ, ವಾಣಿಜ್ಯ ಸಂಯೋಜನೆಯಲ್ಲಿ ನಾಲ್ಕು ವರ್ಷಗಳಲ್ಲೂ ಶೂನ್ಯ ಫಲಿತಾಂಶವಿದೆ. ವಿಜ್ಞಾನ ಸಂಯೋಜನೆಯನ್ನು 2005ರಿಂದ ಅನುದಾನಕ್ಕೊಳಪಡಿಸಲಾಗಿದ್ದು, ಹಿಂದಿನ ನಾಲ್ಕು ವರ್ಷಗಳಲ್ಲಿ, ಎರಡು ವರ್ಷ ತಲಾ ಒಬ್ಬ ವಿದ್ಯಾರ್ಥಿ ಉತ್ತೀರ್ಣರಾಗಿದ್ದು, ಇನ್ನೆರಡು ವರ್ಷಗಳಲ್ಲಿ ಶೂನ್ಯ ಫಲಿತಾಂಶವಿದೆ. 1997 ರಿಂದ 2006ರವರೆಗೆ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ ಕೇವಲ 57 ಹಾಗೂ ಇದೇ ಅವಧಿಯಲ್ಲಿ ಸಿಬ್ಬಂದಿಯ ವೇತನಕ್ಕೆ ಖರ್ಚು ಮಾಡಲಾದ ಅನುದಾನ ಅಂದಾಜು ರೂ.3.00 ಕೋಟಿಗಳು ಇರುತ್ತದೆಂದೂ, ವೇತನಾನುದಾನ ತಡೆಹಿಡಿದಿರುವ 1–4–2007 ರಿಂದ 31–5–2009ರವರೆಗಿನ ಅವಧಿಗೆ ಒಟ್ಟು ಅಂದಾಜು ರೂ.1,17,54,000–00ಗಳನ್ನು ಬಾಕಿ ವೇತನವಾಗಿ ಪಾವತಿಸಿದಲ್ಲಿ ಆರ್ಥಿಕ ಹೊರೆ ಉಂಟಾಗುತ್ತದೆ. ಅಗತ್ಯಕ್ಕಿಂತ ಹೆಚ್ಚಿನ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇವುಗಳಲ್ಲಿ 8 ಹುದ್ದೆಗಳು ಅಗತ್ಯವಿರುವುದಿಲ್ಲವೆಂದೂ, ಕೇವಲ ಬೆರಳೆಣಿಕೆಯ ವಿದ್ಯಾರ್ಥಿಗಳಿಗಾಗಿ ಸಾಕಷ್ಟು ಸರ್ಕಾರಿ ಹಣ ಅಪವ್ಯಯವಾಗಿರುತ್ತದೆಂದೂ, ಪ್ರಸ್ತುತ ಪ್ರತಿ ಸಂಯೋಜನೆಯಲ್ಲಿ ಇರಬೇಕಾದ ಕನಿಷ್ಠ 40 ವಿದ್ಯಾರ್ಥಿಗಳಿಲ್ಲದಿರುವುದರಿಂದ, ಅನುದಾನ ಸಂಹಿತೆಯ ನಿಯಮಗಳನುಸಾರ ಬೋಧನೆ ಮಾಡದಿದ್ದರೂ ಸಹ ಸರ್ಕಾರದ ಸಹಾಯಾನುದಾನ ಮುಂದುವರೆಸಬೇಕೆಂಬ ಸಂಸ್ಥೆಯ ಬೇಡಿಕೆಯನ್ನು ಒಪ್ಪುವುದು ಸಮಂಜಸವಲ್ಲವೆಂದೂ, ಸಹಾಯಾನುದಾನಕ್ಕೆ ಒಳಪಟ್ಟು 24 ವರ್ಷಗಳು ಗತಿಸಿದ್ದರೂ, ಅಗತ್ಯ ಮೂಲಸೌಕರ್ಯಗಳನ್ನು ಹೊಂದಿಲ್ಲದಿರುವುದರಿಂದ ಸರ್ಕಾರದ ಅನುದಾನವು ದುರ್ಬಳಕೆಯಾಗುತ್ತಿದ್ದು, ಪುನ: ಈ ಕಾಲೇಜಿನ ಮಾನ್ಯತೆಯನ್ನು ಮುಂದುವರೆಸಿ ಅನುದಾನ ಬಿಡುಗಡೆಗೊಳಿಸುವುದು ಸೂಕ್ತವಲ್ಲವೆಂದು ಅಭಿಪ್ರಾಯ ತಿಳಿಸಿ, ಶಿಕ್ಷಣ ಕಾಯ್ದೆಯ ಕಲಂ 39(1)ರನ್ವಯ ಈ ಕಾಲೇಜಿನ ಮಂಜೂರಾತಿ ಆದೇಶವನ್ನು ರದ್ದುಪಡಿಸುವಂತೆ ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಸರ್ಕಾರವನ್ನು

ಮುಂದುವರೆದಿದೆ

ಕೋರಿದ್ದರು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಮೇಲೆ(4)ರಲ್ಲಿ ಓದಲಾದ ಸರ್ಕಾರದ ಆದೇಶವನ್ನು ಪುನರ್‌ಪರಿಶೀಲಿಸಿ, ಮೇಲೆ (6)ರಲ್ಲಿ ಓದಲಾದ ಆದೇಶದಲ್ಲಿ ಈ ಕಾಲೇಜಿನ ಮಂಜೂರಾತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿತ್ತು.

ಸದರಿ ಸಂಸ್ಥೆಯು ಈ ಮೇಲಿನ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅರ್ಜಿ ಸಂ.83378/2009ನ್ನು ದಾಖಲಿಸಿದ್ದರು. ಮಾನ್ಯ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯ ಮೇಲೆ ದಿನಾಂಕ 20–4–2010ರಂದು ತೀರ್ಪು ನೀಡಿ, ದಿನಾಂಕ 1–4–2007ರಿಂದ ತಡೆಹಿಡಿದಿರುವ ವೇತನಾನುದಾನವನ್ನು ಬಿಡುಗಡೆಗೊಳಿಸಿ, ಆಗಸ್ಟ 2010ರವರೆಗೆ ಮುಂದುವರೆಸಲು ಮತ್ತು ಆ ಸಮಯದ ನಂತರ ರಿಟ್ ಅರ್ಜಿದಾರರು ಷರತ್ತುಗಳನ್ನು ಪೂರೈಸಿಲ್ಲದಿದ್ದಲ್ಲಿ, ಕಾನೂನು ರೀತ್ಯ ಕ್ರಮಕೈಗೊಳ್ಳುವಂತೆ ಸರ್ಕಾರಕ್ಕೆ ನಿರ್ದೇಶಿಸಿತ್ತು. ಸರ್ಕಾರವು, ಈ ತೀರ್ಪನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದ ಮುಂದೆ ರಿಟ್ ಅಪೀಲು ಸಂ.10140/2010ನ್ನು ದಾಖಲಿಸಿತ್ತು, ಮಾನ್ಯ ಉಚ್ಚ ನ್ಯಾಯಾಲಯವು ಈ ರಿಟ್ ಅಪೀಲನ್ನು ಭಾಗಶ: ಅಂಗೀಕರಿಸಿ ದಿನಾಂಕ 20–9–2010ರಂದು ಇತ್ಯರ್ಥಪಡಿಸಿದ್ದು, ರಿಟ್ ಅರ್ಜಿಯ ಮೇಲಿನ ಏಕಸದಸ್ಯ ಪೀಠದ ಮಾನ್ಯ ನ್ಯಾಯಮೂರ್ತಿಯವರ ತೀರ್ಪಿನಲ್ಲಿ 1–4–2007 ರಿಂದ ಆಗಸ್ಟ್ 2010ರವರೆಗೆ ತಡೆಹಿಡಿಯಲಾದ ವೇತನಾನುದಾನವನ್ನು ಬಿಡುಗಡೆಗೊಳಿಸಬೇಕೆಂಬುದಾಗಿ ಆದೇಶಿಸಿರುವ ಭಾಗವನ್ನು ರದ್ದುಪಡಿಸಿದೆ. ಮತ್ತು ಈ ತೀರ್ಪಿನಲ್ಲಿ ಗಮನಿಸಲಾಗಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ಪ್ರಕರಣವನ್ನು ಕರ್ನಾಟಕ ಶಿಕ್ಷಣ ಕಾಯ್ದೆಯ ಕಲಂ 39 ಮತ್ತು 53ರಡಿ ಕಾನೂನು ರೀತ್ಯ ವಿಚಾರಣೆ ನಡೆಸುವಂತೆ ಹಾಗೂ ಸಂಸ್ಥೆಯ ಕೋರಿಕೆಯನ್ನು ಪರಿಗಣಿಸಿ ಆರು ತಿಂಗಳೊಳಗಾಗಿ ಸೂಕ್ತ ಆದೇಶವನ್ನು ಹೊರಡಿಸುವಂತೆ ತಿಳಿಸಿ, ಈ ವಿಷಯವನ್ನು ಪ್ರಾಧಿಕಾರಿಗಳಿಗೆ ಹಿಂತಿರುಗಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯ ಅಧ್ಯಕ್ಷರು ಸರ್ಕಾರಕ್ಕೆ ಸಲ್ಲಿಸಿದ್ದ ದಿನಾಂಕ 27-10–2010ರ ಮನವಿಯನ್ನು ಮೇಲೆ (9)ರಲ್ಲಿ ಓದಲಾದ ಸರ್ಕಾರದ ಪತ್ರದೊಂದಿಗೆ ನಿರ್ದೇಶಕರು, ಪಪೂಶಿಇ ಇವರಿಗೆ ಕಳುಹಿಸಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಿಗದಿತ ಸಮಯದ ಒಳಗೆ ಶಿಕ್ಷಣ ಕಾಯ್ದೆಯ ಕಲಂ 39ರನ್ವಯ ವಿಚಾರಣೆ ನಡೆಸಿ, ಕಲಂ 53ರನ್ವಯ ವಿಚಾರಣೆಗಾಗಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ

ಮುಂದುವರೆದಿದೆ

ತಿಳಿಸಲಾಗಿತ್ತು. ಸದರಿ ಸಂಸ್ಥೆಯ ಅಧ್ಯಕ್ಷರು ಹಲವಾರು ದಾಖಲೆಗಳ ಪ್ರತಿಯೊಂದಿಗೆ ಪುನ: ಸರ್ಕಾರಕ್ಕೆ ದಿನಾಂಕ 25–11–2010ರಂದು ಮನವಿ ಸಲ್ಲಿಸಿದ್ದು, ಸದರಿ ಮನವಿಯನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಿಳಿಸಿ ನಿರ್ದೇಶಕರು, ಪಪೂಶಿಇ ಇವರಿಗೆ ಮೇಲೆ(10)ರಲ್ಲಿ ಓದಲಾದ ಪತ್ರದಲ್ಲಿ ತಿಳಿಸಲಾಗಿತ್ತು.

ಗವಾನ್ ಎಜುಕೇಶನಲ್ ಟ್ರಸ್ಟ್‌ನ ಎಐಎಂಇಎಸ್ ಪದವಿ ಪೂರ್ವ ಕಾಲೇಜು, ಬೀದರ್ ಈ ಕಾಲೇಜಿನ ಮಾನ್ಯತೆ ಮುಂದುವರೆಸಬೇಕೆಂಬ ಕೋರಿಕೆಯ ಬಗ್ಗೆ ಪರಿಶೀಲಿಸಿ, ಕರ್ನಾಟಕ ಶಿಕ್ಷಣ ಕಾಯ್ದೆ, 1983 ಕಲಂ 39ನ್ನು ಉಲ್ಲಂಘಿಸಿರುವ ಕಾರಣದಿಂದ ಈ ಕಾಲೇಜಿನ ಮಾನ್ಯತೆ ಮುಂದುವರೆಸುವ ಕೋರಿಕೆಯನ್ನು ತಿರಸ್ಕರಿಸಿ ಕಾಲೇಜಿನ ಮಂಜೂರಾತಿ ಆದೇಶವನ್ನು ರದ್ದುಪಡಿಸಲು ಏಕೆ ಕ್ರಮ ಕೈಗೊಳ್ಳಬಾರದೆಂದು ಕಾರಣ ಕೇಳಿ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರು ಸದರಿ ಕಾಲೇಜಿನ ಆಡಳಿತ ಮಂಡಳಿಗೆ ಮೇಲೆ (10)ರಲ್ಲಿ ಓದಲಾದ ದಿನಾಂಕ 21–01–2011ರ ಸೂಚನಾ ಪತ್ರ ಜಾರಿಗೊಳಿಸಿ, ಈ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು 30 ದಿನಗಳ ಕಾಲಾವಕಾಶ ನೀಡಿದ್ದರು. ಸದರಿ ಆಡಳಿತ ಮಂಡಳಿಯು ನೋಟೀಸಿನಲ್ಲಿ ಪ್ರಸ್ತಾಪಿಸಿರುವ ಅಂಶಗಳಿಗೆ ನಿಗದಿತ ಅವಧಿಯೊಳಗೆ ಹೇಳಿಕೆ ಸಲ್ಲಿಸಿರುವುದಿಲ್ಲ.- ಬದಲಾಗಿ ಇಲ್ಲ ಸಲ್ಲದ ನೆಪಗಳಿಂದ ಕಾಲವ್ಯಯ ಮಾಡಲು ಪ್ರಯತ್ನಿಸಿರುತ್ತಾರೆ. ನಿರ್ದೇಶಕರು ದಿನಾಂಕ 7–3–2011ರ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ ನಂತರ ದಿನಾಂಕ 10–03–2011ರ ಅವರ ಲಿಖಿತ ಹೇಳಿಕೆಯನ್ನು ನಿರ್ದೇಶಕರಿಗೆ ಸಲ್ಲಿಸಿದ್ದು, ಅದರ ಪ್ರತಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅವರ ಹೇಳಿಕೆಯ ಪ್ರತಿಯು ಸರ್ಕಾರದ ಹಂತದಲ್ಲಿ ದಿನಾಂಕ 14–03–2011ರಂದು ಸ್ವೀಕೃತವಾಗಿದೆ. ಸದರಿಯವರ ಹೇಳಿಕೆಯನ್ನು ಪರಿಶೀಲಿಸಲಾಗಿ, ನಿರ್ದೇಶಕರು ನೀಡಿರುವ ಸೂಚನಾ ಪತ್ರದಲ್ಲಿನ ಅಂಶಗಳಿಗೆ ಸಮಂಜಸವಾದ ಸಮರ್ಥನೆಗಳನ್ನು ನೀಡಿಲ್ಲದಿರುವುದು ಕಂಡುಬರುತ್ತದೆ. ಸದರಿ ಹೇಳಿಕೆಯಲ್ಲಿ ಹೊಸ ನಿವೇಶನದಲ್ಲಿ ಕಟ್ಟಡ ಕಾರ್ಯ ಪ್ರಗತಿಯಲ್ಲಿದ್ದು, ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೊಸಕಟ್ಟಡಕ್ಕೆ ಸ್ಥಳಾಂತರಗೊಳ್ಳುವುದಾಗಿ ತಿಳಿಸಿ, ಅನೆಕ್ಷರ್–ಬಿ ಎಂಬುದಾಗಿ ಗುರುತಿಸಿರುವ ಪಟ್ಟಿಯಲ್ಲಿ ಬೋಧನಾ ಕೊಠಡಿಗಳನ್ನು, ಲೈಬ್ರರಿ, ಸಿಬ್ಬಂದಿ ಕೊಠಡಿ, ಕಛೇರಿ ಮತ್ತು ಪ್ರಾಂಶುಪಾಲರ ಕೊಠಡಿಗಳನ್ನು ಹಾಗೂ ಕುಡಿಯುವ ನೀರು ವಿದ್ಯುತ್ ಒದಗಿಸಿರುವುದಾಗಿ ನಮೂದಿಸಿದ್ದಾರೆ: ಇನ್ನುಳಿದ ಮೂಲಸೌಕರ್ಯಗಳು ಮತ್ತು ಕೊಠಡಿಗಳನ್ನು ಜೂನ್ 2011ರೊಳಗೆ ಸಂಪೂರ್ಣಗೊಳಿಸುವುದಾಗಿ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ

ಮುಂದುವರೆದಿದೆ

ಸಂಬಂಧಿಸಿದಂತೆ 1997 ರಿಂದ 2010ರವರೆಗೆ ಎರಡನೇ ಪಿ.ಯು.ಪರೀಕ್ಷೆಗೆ ನೋಂದಾಯಿಸಿದ ಮತ್ತು ಪರೀಕ್ಷೆಗೆ ಹಾಜರಾದ ಹಾಗೂ ಗೈರುಹಾಜರಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ನಮೂದಿಸಿದ ಹಾಳೆಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಒದಗಿಸಿದ್ದಾರೆ. ಈ ಅಂಕಿಅಂಶಗಳಿಗೂ ಮತ್ತು ನಿರ್ದೇಶಕರ ವರದಿಯಲ್ಲಿನ ಅಂಕಿ ಅಂಶಗಳಿಗೂ ವ್ಯತ್ಯಾಸಗಳಿರುತ್ತವೆ. 2009–10ನೇ ಸಾಲಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 39 ಎಂಬುದಾಗಿ ಮತ್ತೊಂದು ಪಟ್ಟಿಯಲ್ಲಿ ವಿವರಿಸಿದ್ದು, ಅವರುಗಳು ಎಸ್.ಎಸ್.ಎಲ್.ಸಿ.ಪಾಸಾದ ವರ್ಷಗಳನ್ನು ತಿಳಿಸಿದ್ದು, ಅದನ್ನು ಗಮನಿಸಲಾಗಿ 1999 ರಿಂದ 2007ರವರೆಗಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ತೇರ್ಗಡೆಯಾದ ತಲಾ ಒಬ್ಬ ವಿದ್ಯಾರ್ಥಿಗಳಿರುವುದು, 2008ರ 3 ಮತ್ತು 2009ರ 27 ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. 10–11 ವರ್ಷಗಳ ಹಿಂದೆ ಎಸ್.ಎಸ್.ಎಲ್.ಸಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಈಗ 1ನೇ ಪಿ.ಯು.ತರಗತಿಗೆ ಪ್ರವೇಶ ಮಾಡಿಕೊಂಡಿರುತ್ತಾರೆಂಬುದು ಕಂಡುಬರುತ್ತದೆ. ಇನ್ನು 2ನೇ ಪಿ.ಯು. ತರಗತಿಗೆ ಅದೇ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಿಗೆ ಮತ್ತು ಬೇರೆ ಕಾಲೇಜಿನಿಂದ ಅನುಮತಿ ಮೇರೆಗೆ 4 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿರುವುದಾಗಿ ತಿಳಿಸಿದ್ದಾರೆ. ಒಟ್ಟಾರೆ ಪ್ರಥಮ ಮತ್ತು ದ್ವಿತೀಯ ಪಿ.ಯು ತರಗತಿಗಳಿಗೆ ಸೇರಿ 45 ವಿದ್ಯಾರ್ಥಿಗಳಿರುವುದಾಗಿ ತಿಳಿಸಿದ್ದಾರೆ. ಈ ಅಂಕಿ ಅಂಶಗಳು ಸತ್ಯಾಂಶದಿಂದ ಕೂಡಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ನಿರ್ದೇಶಕರು, ಪಪೂಶಿಇ ಇವರು ಸರ್ಕಾರಕ್ಕೆ ಸಲ್ಲಿಸಿರುವ ಮೇಲೆ (11)ರಲ್ಲಿ ಓದಲಾಗಿರುವ ದಿನಾಂಕ 07–03–2011ರ ವರದಿ ಮತ್ತು ವರದಿಯೊಂದಿಗೆ ಒದಗಿಸಿರುವ ದಾಖಲೆಗಳನ್ನು ಪರೀಶೀಲಿಸಲಾಗಿ, ನಿರ್ದೇಶಕರು ತಮ್ಮ ದಿನಾಂಕ 7–3–2011ರ ಪತ್ರದಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಪದವಿ ಪೂರ್ವ ಕಾಲೇಜಿನಲ್ಲಿ ನಿಯಮಗಳನ್ವಯ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿಲ್ಲವಾದುದರಿಂದ ಹಾಗೂ ಹಲವಾರು ವರ್ಷಗಳಿಂದ ನಿಗದಿತ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಇಲ್ಲದಿರುವುದರಿಂದ ಈ ಕಾಲೇಜಿನ ಅನುದಾನಿತ ಸಿಬ್ಬಂದಿಯ 1–4–2007 ರಿಂದ ತಡೆಹಿಡಿದಿರುವ ವೇತನಾನುದಾನವನ್ನು ಬಿಡುಗಡೆ ಮಾಡುವುದು ಅಥವಾ ಮುಂದುವರೆಸುವುದು ಸೂಕ್ತವಲ್ಲವೆಂದು ಅಭಿಪ್ರಾಯ ತಿಳಿಸಿದ್ದಾರೆ. ಈ ಕಾಲೇಜಿನ ಮಂಜೂರಾತಿ ಆದೇಶವನ್ನು ರದ್ದುಪಡಿಸಲು ಕ್ರಮ ಜರುಗಿಸಲು ಕೋರಿದ್ದಾರೆ. ಒಂದು ವೇಳೆ ಈ ಆಡಳಿತ ಮಂಡಳಿಯು ನಿರ್ಮಿಸುತ್ತಿರುವ ಕಟ್ಟಡ ಪೂರ್ಣಗೊಂಡ ನಂತರ ಸದರಿ ಕಟ್ಟಡದಲ್ಲಿ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ ನೀಡಬೇಕೆಂದು ಬೇಡಿಕೆ ಮುಂದಿಟ್ಟಲ್ಲಿ ಹೊಸ ಪದವಿ

ಮುಂದುವರೆದಿದೆ

ಪೂರ್ವ ಕಾಲೇಜು ಪ್ರಾರಂಭಿಸಲು ಅನುಸರಿಸುವ ಮಾರ್ಗಸೂಚಿಗಳನ್ವಯ ಹೊಸದಾಗಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬಹುದೆಂದು ತಿಳಿಸಿದ್ದಾರೆ. ಈ ಕಾಲೇಜಿನ ಮಂಜೂರಾತಿ ರದ್ದುಪಡಿಸಿದಲ್ಲಿ ಇಲ್ಲಿನ ಅನುದಾನಿತ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿಯ ಅಸ್ತಿತ್ವದ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸಲು ಕೋರಿದ್ದಾರೆ.

ನಿರ್ದೇಶಕರ ವರದಿಯನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಗವಾನ್ ಎಜುಕೇಷನಲ್ ಟ್ರಸ್ಟ್, ಬೀದರ್ ಇವರು ಪ.ಪೂ.ಕಾಲೇಜಿಗೆ 2005ನೇ ಸಾಲಿನಲಿ 10463 ಚದರ ಅಡಿ ವಿಸ್ತೀರ್ಣದ ನಿವೇಶನ ಖರೀದಿಸಿದ್ದು, ಈ ನಿವೇಶನದಲ್ಲಿ 40x40 ಚದರ ಅಡಿಯ ಪ್ಲಿಂತ್ ಏರಿಯಾದಲ್ಲಿ ನೆಲ ಅಂತಸ್ತು, ಮೊದಲನೇ ಮತ್ತು ಎರಡನೇ ಅಂತಸ್ತಿನಲ್ಲಿ ಕಟ್ಟಡ ನಿರ್ಮಿಸುತ್ತಿದ್ದು, ದಿನಾಂಕ 1–3–2011ರಂದು ಸ್ಥಳಪರಿಶೀಲನೆ ಮಾಡಿರುವ ವರದಿಯನ್ವಯ ಕಟ್ಟಡ ನಿರ್ಮಾಣ ಅಪೂರ್ಣವಿದ್ದು, ಐದು ಕೊಠಡಿಗಳಿಗೆ ಗೋಡೆಗಳಿಗೆ ಪ್ಲಾಸ್ಟರ್ ಮಾತ್ರ ಮಾಡಿದ್ದು, ನೆಲಹಾಸು ಮತ್ತು ವಿದ್ಯುತ್, ಮರಗೆಲಸ ಇತರ ಎಲ್ಲಾ ಕೆಲಸಗಳು ಬಾಕಿ ಇರುತ್ತವೆ. ಇನ್ನುಳಿದ ಕೊಠಡಿಗಳಿಗೆ ಪ್ಲಾಸ್ಟರ್, ನೆಲಹಾಸು, ಮರಗೆಲಸ, ವಿದ್ಯುತ್ ಇತ್ಯಾದಿ ಕಾರ್ಯಗಳು ಬಾಕಿ ಇರುತ್ತವೆ. ಶೌಚಾಲಯಗಳು ಇನ್ನಿತರ ಸೌಕರ್ಯಗಳು ಇನ್ನೂ ನಿರ್ಮಾಣ ಹಂತದಲ್ಲಿವೆ. ಹಾಗೂ ಮುಖ್ಯವಾಗಿ 2006ರಿಂದ 2010ರವರೆಗೆ ನಿಗದಿತ ಸಂಖ್ಯೆಯ ವಿದ್ಯಾರ್ಥಿಗಳ ಸಂಖ್ಯೆ ಇರುವುದಿಲ್ಲ. ಫಲಿತಾಂಶ ಶೂನ್ಯವಿರುತ್ತದೆ. ಮೂಲಸೌಕರ್ಯಗಳನ್ನು ಸಂಪೂರ್ಣವಾಗಿ ಒದಗಿಸಿಕೊಂಡಿರುವುದಿಲ್ಲ ಹಾಗೂ ನಿಗದಿತ ವಿದ್ಯಾರ್ಥಿಗಳ ಸಂಖ್ಯಾಬಲವಿಲ್ಲವೆಂಬುದು ಕಂಡುಬರುತ್ತದೆ. ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವ ಮುಂಚೆ ನಿರ್ದೇಶಕರು, ಪಪೂಶಿಇ ಇವರ ವರದಿ ಮತ್ತು ಅದರೊಂದಿಗೆ ಕಳುಹಿಸಲಾಗಿರುವ ಎಲ್ಲಾ ದಾಖಲೆಗಳ ಪ್ರತಿಯನ್ನು ಆಡಳಿತ ಮಂಡಳಿಗೆ ಒದಗಿಸಿ, ನಿರ್ದೇಶಕರ ವರದಿಯನ್ವಯ ಅನುದಾನ ಮಂಜೂರಾತಿಯ ಷರತ್ತುಗಳನ್ನು ಪೂರೈಸಲು ವಿಫಲರಾಗಿರುವುದರಿಂದ, ಈ ಕಾಲೇಜಿನ ಸಿಬ್ಬಂದಿಯ 1–4–2007ರಿಂದ ತಡೆಹಿಡಿದಿರುವ ವೇತನಾನುದಾನವನ್ನು ಹಿಂದಕ್ಕೆ ಪಡೆದು ಕಾಲೇಜಿನ ಮಂಜೂರಾತಿಯನ್ನು ರದ್ದುಪಡಿಸಲು ಏಕೆ ಕ್ರಮಜರುಗಿಸಬಾರದು ಎಂಬ ಬಗ್ಗೆ ಕಾರಣಗಳನ್ನು ತಿಳಿಸಲು 15 ದಿನಗಳ ಕಾಲಾವಕಾಶ ನೀಡಿ ಕರ್ನಾಟಕ ಶಿಕ್ಷಣ ಕಾಯ್ದೆಯ ಕಲಂ 53ರನ್ವಯ ಮೇಲೆ(12)ರಲ್ಲಿ ಓದಲಾಗಿರುವ ಸೂಚನಾ ಪತ್ರವನ್ನು ಸಂಸ್ಥೆಯ ಅಧ್ಯಕ್ಷರಿಗೆ ಜಾರಿಗೊಳಿಸಲಾಗಿರುತ್ತದೆ.

ಮುಂದುವರೆದಿದೆ

ಸಂಸ್ಥೆಯ ಅಧ್ಯಕ್ಷರು ಮೇಲೆ (13)ರಲ್ಲಿ ಓದಲಾದ ಪತ್ರದೊಂದಿಗೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಲೆಕ್ಕ ವಿಭಾಗದ ಸಹಾಯಕ ನಿರ್ದೇಶಕರು ಮತ್ತು ಸಿಬ್ಬಂದಿ ದಿನಾಂಕ 6-12-2010 ರಿಂದ 10-12-2010ರವರೆಗೆ ಸದರಿ ಕಾಲೇಜಿನ ಲೆಕ್ಕಗಳ ಮತ್ತು ಆಡಳಿತಾತ್ಮಕ ವಿಷಯಗಳನ್ನು ತಪಾಸಣೆ ಮಾಡಿ ಸಲ್ಲಿಸಿರುವ ವರದಿಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆ. ನಿರ್ದೇಶಕರು, ಪಪೂಶಿಇ ಇವರು ಮೇಲೆ (14)ರಲ್ಲಿ ಓದಲಾದ ಪತ್ರದಲ್ಲಿ, ನಿರ್ದೇಶಕರ ಕಛೇರಿಯಿಂದ ಜಾರಿಗೊಳಿಸಲಾಗಿದ್ದ ಸೂಚನಾ ಪತ್ರಕ್ಕೆ ಸಂಸ್ಥೆಯ ಅಧ್ಯಕ್ಷರು ತಡವಾಗಿ ಸಲ್ಲಿಸಿರುವ ಉತ್ತರದ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಿದ್ದು, ತಮ್ಮ ಕಛೇರಿಯಿಂದ ನೀಡಲಾಗಿರುವ ಸೂಚನಾ ಪತ್ರದಲ್ಲಿ ಪ್ರಸ್ತಾಪಿಸಿರುವ ಯಾವ ಅಂಶಗಳಿಗೂ ಸ್ಪಷ್ಟ ಉತ್ತರ ನೀಡಿರುವುದಿಲ್ಲವೆಂದೂ, ಮತ್ತು ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಂಡಿರುವ ಬಗ್ಗೆ ಯಾವುದೇ ದಾಖಲೆಗಳನ್ನೂ ಸಹ ಸಲ್ಲಿಸಿಲ್ಲವೆಂದು ವರದಿ ಮಾಡಿ, ತಮ್ಮ ಕಛೇರಿಯ ದಿನಾಂಕ 7-3-2011ರ ಪತ್ರದಲ್ಲಿನ ವರದಿಯ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಸಂಸ್ಥೆಯ ಅಧ್ಯಕ್ಷರು ಮೇಲೆ (15)ರಲ್ಲಿ ಓದಲಾದ ಮನವಿಯನ್ನು ಸಲ್ಲಿಸಿ, ನಿರ್ದೇಶಕರ ಕಛೇರಿಯಿಂದ ನೀಡಲಾದ ದಿನಾಂಕ 21-1-2011ರ ಸೂಚನಾ ಪತ್ರಕ್ಕೆ ದಿನಾಂಕ 11-03-2011ರಂದು ತಮ್ಮ ಉತ್ತರ ಸಲ್ಲಿಸಿರುವುದರಿಂದ, ಕಲಂ 39 ಮತ್ತು 53ರನ್ವಯ ಯಾವುದೇ ಪ್ರತಿಕೂಲ ಕ್ರಮಜರುಗಿಸುವುದು ಅಗತ್ಯವಾಗುವುದಿಲ್ಲವೆಂದೂ, ಈ ಬಗ್ಗೆ ಖುದ್ದಾಗಿ ಹಾಜರಾಗಿ ವಿವರಣೆ ಸಲ್ಲಿಸಲು ಅವಕಾಶ ನೀಡಲು ಕೋರಿದ್ದಾರೆ.

ಸರ್ಕಾರವು, ಶಿಕ್ಷಣ ಕಾಯ್ದೆಯ ಕಲಂ 53ರಡಿ ಜಾರಿಗೊಳಿಸಿರುವ ಮೇಲೆ(12)ರಲ್ಲಿ ಓದಲಾದ ಕಾರಣ ಕೇಳುವ ಸೂಚನಾ ಪತ್ರಕ್ಕೆ, ಮೇಲೆ (16)ರಲ್ಲಿ ಓದಲಾಗಿರುವ ಲಿಖಿತ ವಿವರಣೆಯನ್ನು ಸಂಸ್ಥೆಯ ಅಧ್ಯಕ್ಷರು ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಸದರಿ ಸಂಸ್ಥೆಯ ಅಧ್ಯಕ್ಷರು ನೀಡಿರುವ ಉತ್ತರಗಳನ್ನು ಪರಿಶೀಲಿಸಲಾಗಿ, ಈ ಕೆಳಗಿನ ಅಂಶಗಳ ಕಾರಣದಿಂದ ಅವರು ಸಲ್ಲಿಸಿರುವ ಉತ್ತರಗಳು ಸಮಂಜಸವಲ್ಲ ಹಾಗೂ ಸಮರ್ಥನೀಯವಲ್ಲವೆಂದು ಕಂಡುಬರುತ್ತವೆ.

1. ನಿರ್ದೇಶಕರು ಕಲಂ 39ರಡಿ ಮಾನ್ಯತೆ ರದ್ದುಪಡಿಸುವ ಬಗ್ಗೆ ಕಾರಣ ಕೇಳಿ ನೀಡಿರುವ ಸೂಚನಾ ಪತ್ರಕ್ಕೆ ಸಲ್ಲಿಸಿರುವ ಹೇಳಿಕೆಯಲ್ಲಿ ಸಮಂಸವಾದ ಸಮರ್ಥನೆಗಳನ್ನು ನೀಡಿಲ್ಲವೆಂಬುದಾಗಿ ತಿಳಿಸಿರುವುದಕ್ಕೆ ಸಂಸ್ಥೆಯಿಂದ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ. ಅಲ್ಲದೇ ನಿರ್ದೇಶಕರ ಕಛೇರಿಯ ಅಧಿಕಾರಿ/ಸಿಬ್ಬಂದಿಯು ಶೈಕ್ಷಣಿಕ ತಪಾಸಣೆ ಮಾಡಿ

ಮುಂದುವರೆದಿದೆ

ಗುರುತಿಸಿರುವ ಹಲವಾರು ಲೋಪದೋಷಗಳ ಬಗ್ಗೆ ಸಂಸ್ಥೆಯು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.

2. ವಿದ್ಯಾರ್ಥಿಗಳ ಸಂಖ್ಯಾಬಲಕ್ಕೆ ಸಂಬಂಧಿಸಿದಂತೆ ನಿರ್ದೇಶಕರು, ಪಪೂಶಿಇ ಇವರು ತಮ್ಮ ವರದಿಯಲ್ಲಿ ನೀಡಿರುವ ಅಂಕಿ ಅಂಶಗಳಿಗೂ ಮತ್ತು ಸಂಸ್ಥೆಯ ಕಾಲೇಜಿನ ಪ್ರಾಂಶುಪಾಲರು ಒದಗಿಸಿರುವ ಅಂಕಿಅಂಶಗಳಿಗೂ ವ್ಯತ್ಯಾಸಗಳಿವೆ ಎಂಬುದಕ್ಕೆ ಇಲಾಖೆ ಅಂಕಿ ಅಂಶಗಳನ್ನು ಒದಗಿಸಿದ ಕಾರಣಕ್ಕೆ ಸಂಸ್ಥೆಯು ಒದಗಿಸಿರುವ ಮಾಹಿತಿ ಸುಳ್ಳು ಅಥವಾ ತಿರುಚಿದ ಮಾಹಿತಿ ಎಂದು ಅರ್ಥವಲ್ಲ ಎಂದು ತಿಳಿಸಿದ್ದಾರೆ. ಬೇರೆ ಕಾಲೇಜಿನ ವಿದ್ಯಾರ್ಥಿಗಳನ್ನು ತಮ್ಮ ಕಾಲೇಜಿಗೆ ವರ್ಗಾಯಿಸಿಕೊಳ್ಳಲು ಇಲಾಖೆಯೇ ಅನುಮೋದನೆ ನೀಡಿದೆಯೆಂದು ತಿಳಿಸಿದ್ದಾರೆ. ಬಹಳ ಹಿಂದೆ ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳನ್ನು ಕಾಲೇಜಿಗೆ ದಾಖಲು ಮಾಡಿಕೊಳ್ಳಬಾರದೆಂದು ನಿಯಮದಲ್ಲಿ ಇರುವುದಿಲ್ಲ ಎಂದು ತಿಳಿಸಿದ್ದಾರೆ. ವಿದ್ಯಾರ್ಥಿಗಳ ದಾಖಲಾತಿ/ಸಂಖ್ಯಾಬಲಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ನೀಡಿರುವ ಉತ್ತರವು ಸಮಂಜಸವಲ್ಲ. ಕೇವಲ ವಿದ್ಯಾರ್ಥಿಗಳ ಸಂಖ್ಯಾಬಲ ತೋರಿಸುವುದಕ್ಕಾಗಿ 10–11 ವರ್ಷಗಳ ಹಿಂದೆ ಎಸ್.ಎಸ್.ಎಲ್.ಸಿ ತೇರ್ಗಡೆಯಾದ ವಿದ್ಯಾರ್ಥಿಗಳನ್ನು ಪ್ರಥಮ ಪಿ.ಯು.ತರಗತಿಗೆ ದಾಖಲು ಮಾಡಿಕೊಂಡಿರುವುದು ದೃಢಪಡುತ್ತದೆ. ಈ ಕಾಲೇಜಿನಲ್ಲಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಯೋಜನೆ ಹೊಂದಿದ್ದು, ನಿಯಮಾನುಸಾರ ಕಲಾ ಮತ್ತು ವಾಣಿಜ್ಯ ಸಂಯೋಜನೆ ಸೇರಿ ಕನಿಷ್ಠ 40 ಮತ್ತು ವಿಜ್ಞಾನ ಸಂಯೋಜನೆಯಲ್ಲಿ ಪ್ರತ್ಯೇಕವಾಗಿ ಕನಿಷ್ಠ 40 ವಿದ್ಯಾರ್ಥಿಗಳು ಪ್ರಥಮ ಮತ್ತು ದ್ವಿತೀಯ ಪಿ.ಯು.ತರಗತಿಗಳಲ್ಲಿ ಇರಬೇಕಾಗುತ್ತದೆ. ಆದರೆ ಈ ಕಾಲೇಜಿನ ದಾಖಲಾತಿ ಮತ್ತು ಹಾಜರಾತಿಯನ್ನು ನೋಡಲಾಗಿ ವಿದ್ಯಾರ್ಜನೆಯ ದೃಷ್ಟಿಯಿಂದ ಕಾಲೇಜಿಗೆ ದಾಖಲಾದ ನೈಜ ವಿದ್ಯಾರ್ಥಿಗಳ ನಿಗದಿತ ಸಂಖ್ಯಾಬಲ ಪ್ರಥಮ ಪಿ.ಯು.ತರಗತಿಯಲ್ಲಿ ಕನಿಷ್ಠ 40 ಮತ್ತು ದ್ವಿತೀಯ ಪಿ.ಯು.ತರಗತಿಯಲ್ಲಿ ಕನಿಷ್ಠ 40 ಇಲ್ಲದಿರುವುದರಿಂದ ಈ ಸಂಸ್ಥೆಗೆ 1-4-2007ರಿಂದ ತಡೆಹಿಡಿದಿರುವ ವೇತನಾನುದಾನವನ್ನು ಪೂರ್ವಾನ್ವಯವಾಗಿ ಬಿಡುಗಡೆ ಮಾಡಿ ಮುಂದುವರೆಸುವುದಕ್ಕೆ ಸಕಾರಣಗಳಿಲ್ಲ.

3. ಇಲಾಖೆಯು ಸಂಸ್ಥೆಯ ವಿರುದ್ಧ ಕೈಗೊಂಡ ಕ್ರಮಗಳಿಂದ ಮತ್ತು ನಿರ್ದೇಶಕರು ಮತ್ತು ಉಪ ನಿರ್ದೇಶಕರು ವಿದ್ಯಾರ್ಥಿಗಳು ದಾಖಲಾಗದಂತೆ ಮಾಧ್ಯಮಗಳ ಮೂಲಕ ಪ್ರಚಾರ ನಡೆಸಿದ ಕಾರಣದಿಂದ ಕಾಲೇಜಿಗೆ ವಿದ್ಯಾರ್ಥಿಗಳ ದಾಖಲಾತಿ ಕಡಿಮೆಯಾಯಿತು ಎಂಬ ಸಂಸ್ಥೆಯ ವಾದವನ್ನು ಪರಿಶೀಲಿಸಲಾಗಿ, ನಿರ್ದೇಶಕರು ಮತ್ತು ಉಪ ನಿರ್ದೇಶಕರ ಕ್ರಮವನ್ನು ಪ್ರಶ್ನಿಸಿ ಸರ್ಕಾರದ ಪ್ರಾಧಿಕಾರದಲ್ಲಿ ಮಧ್ಯಂತರ ಆದೇಶ ಪಡೆದಿರುವುದನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಸೂಕ್ತವಾದ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿ ವಿದ್ಯಾರ್ಥಿಗಳನ್ನು ದಾಖಲಾಗುವಂತೆ ನೋಡಿಕೊಳ್ಳಲು ಇಲಾಖೆಯಿಂದ ಯಾವ ಅಡ್ಡಿಯೂ ಉಂಟಾಗಿರಲಿಲ್ಲ. ಹಾಗೂ ಸರ್ಕಾರದ ಆದೇಶ ಸಂ. ಇಡಿ 32 ಎಸ್‌ಒಹೆಚ್ 2008 ದಿನಾಂಕ 23–8–2008ರಲ್ಲಿ ಕಾಲೇಜಿಗೆ ಕಟ್ಟಡ ಮತ್ತು ಮೂಲ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಎರಡು ವರ್ಷಗಳ ಕಾಲಾವಕಾಶ ನೀಡಿ ಮಾನ್ಯತೆಯನ್ನು ಮುಂದುವರೆಸಲು ಮಂಜೂರಾತಿ ನೀಡಲಾಗಿತ್ತು. ಈ ಆದೇಶವನ್ನು ಸಹ ಸಂಸ್ಥೆಯು ವಿದ್ಯಾರ್ಥಿಗಳು/ಪೋಷಕರ ಗಮನಕ್ಕೆ ತಂದು ವಿದ್ಯಾರ್ಥಿಗಳ ದಾಖಲಾತಿ ಉತ್ತಮಗೊಳಿಸಿಕೊಳ್ಳಲು ಯಾವುದೇ ಅಡ್ಡಿ ಇರಲಿಲ್ಲ. ನಿರ್ದೇಶಕರು ಮತ್ತು ಉಪನಿರ್ದೇಶಕರು ವಿದ್ಯಾರ್ಥಿಗಳ ದಾಖಲಾತಿ ಕುರಿತು ನೀಡಿದ ಪ್ರಚಾರದಿಂದಾಗಿ ಮತ್ತು ಸಂಸ್ಥೆಯ ವಿರುದ್ಧ ಕೈಗೊಂಡ ಕ್ರಮದಿಂದಾಗಿಯೇ ವಿದ್ಯಾರ್ಥಿಗಳ ದಾಖಲಾತಿ ಇಳಿಮುಖವಾಯಿತು ಎಂಬ ಸಂಸ್ಥೆಯ ವಾದದಲ್ಲಿ ಹುರುಳಿಲ್ಲ ಮತ್ತು ಒಪ್ಪತಕ್ಕಂತಹದ್ದಲ್ಲ.

ಮುಂದುವರೆದಿದೆ

4. ಆದರೆ ಈ ಮೇಲಿನಂತೆ ಮೂಲಸೌಕರ್ಯಗಳನ್ನು ಹೊಂದಲು ಎರಡು ವರ್ಷಗಳ ಕಾಲಾವಕಾಶ ನೀಡಿದ ನಂತರ, ಒಂದು ವರ್ಷದ ನಂತರವೂ ಸಂಸ್ಥೆಯು ಕಟ್ಟಡ ಮತ್ತು ಮೂಲಸೌಕರ್ಯಗಳನ್ನು ಹೊಂದಲು ಪ್ರಯತ್ನ ಮಾಡದೇ, ವಿಫಲವಾಗಿರುವ ಕಾರಣ ಮತ್ತು ಎಪ್ರೀಲ್ 1997 ರಿಂದ ಎಪ್ರೀಲ್ 2009ರವರೆಗೆ ದ್ವಿತೀಯ ಪಿ.ಯು.ಸಿ. ಪರೀಕ್ಷೆಗೆ ಸದರಿ ಕಾಲೇಜಿನಿಂದ ನೊಂದಾಯಿಸಿಕೊಂಡ ಮತ್ತು ಉತ್ತೀರ್ಣರಾದ ವಿದ್ಯಾರ್ಥಿಗಳ ಅಂಕಿಅಂಶಗಳನ್ನು ನೋಡಲಾಗಿ ಮತ್ತು ಬಹಳಷ್ಟು ವಿದ್ಯಾರ್ಥಿಗಳು ಎಲ್ಲಾ ವಿಷಯಗಳಲ್ಲಿ ಪರೀಕ್ಷೆಗೆ ಗೈರುಹಾಜರಾಗಿರುವುದನ್ನು ಗಮನಿಸಿದ್ದು, ಈ ರೀತಿ ಗೈರು ಹಾಜರಾದ ವಿದ್ಯಾರ್ಥಿಗಳು ಕೇವಲ ಅಂಕಿ ಅಂಶ ತೋರಿಸುವ ಉದ್ದೇಶದಿಂದ/ ಕಾಲೇಜು ನಡೆಯುತ್ತಿದೆ ಎಂದು ತೋರಿಸಿ ಸರ್ಕಾರದಿಂದ ದೊರೆಯುವ ಆರ್ಥಿಕ ಸೌಲಭ್ಯಗಳನ್ನು ಪಡೆಯುವ ಸಲುವಾಗಿ ವಂಚನೆಯಿಂದ ಸೇರ್ಪಡೆಯಾದ ನಕಲಿ ಹೆಸರುಗಳೇ ವಿನ: ನೈಜ ವಿದ್ಯಾರ್ಥಿಗಳಲ್ಲವೆಂಬುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಹಲವಾರು ವರ್ಷಗಳಲ್ಲಿ ಫಲಿತಾಂಶ ಶೂನ್ಯ ಮತ್ತು ಶೂನ್ಯಕ್ಕೆ ಹತ್ತಿರವಿರುವ ಅಂಶವನ್ನು ಗಮನಿಸಿ, ಈ ಕಾಲೇಜಿನ ವೇತನಾನುದಾನವನ್ನು ನಿರ್ದೇಶಕರು, ಪಪೂಶಿಇ ಇವರು ದಿನಾಂಕ 1-4-2007ರಿಂದ ತಡೆಹಿಡಿದಿರುತ್ತಾರೆ.

5. 1997 ರಿಂದ 2006ರವರೆಗೆ ಈ ಕಾಲೇಜಿನಲ್ಲಿ ದ್ವಿತೀಯ ಪಿ.ಯು.ಸಿ. ಪಾಸಾದ ವಿದ್ಯಾರ್ಥಿಗಳು ಕೇವಲ 57 ಮತ್ತು ಇದಕ್ಕಾಗಿ ಸರ್ಕಾರದ ಬೊಕ್ಕಸದಿಂದ ಅನುದಾನ ನೀಡಲಾದ ಮೊತ್ತ ರೂ. ಸುಮಾರು 3.00 ಕೋಟಿಗಳು. ಅಲ್ಲದೇ ಅನಗತ್ಯವಾದ ಹಲವಾರು ಹುದ್ದೆಗಳನ್ನು ಹೊಂದಿ ಅನುದಾನಕ್ಕೊಳಪಡಿಸಿದ್ದು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಕನಿಷ್ಠ ಸಂಖ್ಯೆಯ ವಿದ್ಯಾರ್ಥಿಗಳನ್ನು ಹೊಂದಿಲ್ಲದ ಈ ಕಾಲೇಜಿನಲ್ಲಿ 15 ಜನ ಬೋಧಕ ಮತ್ತು 11 ಜನ ಬೋಧಕೇತರರು ಕಾರ್ಯನಿರ್ವಹಿಸುತ್ತಿದ್ದು, ಇವರಿಗೆ ನೀಡಲಾಗುವ ವೇತನವು ಸರ್ಕಾರಿ ಹಣದ ಸದುಪಯೋಗವಾದಂತಾಗುವುದಿಲ್ಲ.

6. ಸಂಸ್ಥೆ ನಿರ್ಮಿಸುತ್ತಿರುವ ಕಟ್ಟಡವು ನಿರ್ಮಾಣ ಹಂತದಲ್ಲಿದ್ದು, ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದ ಒಳಗೆ ಕಟ್ಟಡ ಉಪಯೋಗಕ್ಕೆ ಸಿದ್ಧಗೊಳ್ಳುವುದೆಂದು ಸಂಸ್ಥೆ ಭರವಸೆ ನೀಡಿದ್ದರೂ, ಈಗಿನ ವಾಸ್ತವ ಸ್ಥಿತಿಯನ್ನು ನೋಡಿದಾಗಲೇ ಈ ಅಂಶವು ದೃಢಪಡುತ್ತದೆ. ಸಂಸ್ಥೆ ಹೊಂದಿರುವ ಸ್ವಂತ ನಿವೇಶನವು ಸಹ ನಿಗದಿತ ವಿಸ್ತೀರ್ಣ 25000 ಚ.ಅ. ಇರುವುದಿಲ್ಲ. 10464 ಚ.ಅ. ಇರುತ್ತದೆ.

7. ಈ ಕಾಲೇಜು 1986-87ರಿಂದ ಅನುದಾನಕ್ಕೆ ಒಳಪಟ್ಟಿದ್ದು, 31-03-2007ರವರೆಗೆ ವೇತನಾನುದಾನ ಪಡೆದಿರುತ್ತದೆ. 1-4-2007ರಿಂದ ವೇತನಾನುದಾನ ತಡೆಹಿಡಿಯಲಾಗಿದೆ. ಇಷ್ಟು ವರ್ಷದ ನಂತರವೂ ಸಂಸ್ಥೆಯು ಸ್ವಂತ ಕಟ್ಟಡವನ್ನು ಪೂರ್ಣಗೊಳಿಸದೇ ಕೇವಲ ನಿಲ್ಲಿಸಿರುವ ವೇತನಾನುದಾನವನ್ನು ಪಡೆಯಲು ಮತ್ತು ಮುಂದುವರೆಸಲು ಕೋರುತ್ತಿದೆ. ವಿದ್ಯಾರ್ಥಿಗಳ ದಾಖಲಾತಿ, ಫಲಿತಾಂಶ, ಮೂಲಸೌಕರ್ಯಗಳಿಗೆ ಇನ್ನು ಮುಂದೆಯೂ ಸುಧಾರಣೆ ಮಾಡಿಕೊಳ್ಳಲು ಅವಕಾಶ ನೀಡಬೇಕಾಗುತ್ತದೆಂದು ಪ್ರತಿಪಾದಿಸುತ್ತಿರುವುದು ಸರಿಯಲ್ಲ. ಆದುದರಿಂದ, ಈ ಕಾಲೇಜಿನ ಮಾನ್ಯತೆಯನ್ನು ಮುಂದುವರೆಸುವುದು ಸೂಕ್ತವಲ್ಲ. ಮತ್ತು ತಡೆಹಿಡಿಯಲಾಗಿರುವ ವೇತನಾನುದಾನವನ್ನು ಬಿಡುಗಡೆಗೊಳಿಸಿ ಮುಂದುವರೆಸುವುದು ಸಾರ್ವಜನಿಕ ಹಣದ ಸದುಪಯೋಗಪಡಿಸಿದಂತಾಗುವುದಿಲ್ಲವೆಂದು ಭಾವಿಸಲಾಗಿದೆ.

8. ನಿರ್ದೇಶಕರ ಕಛೇರಿಯ ಲೆಕ್ಕ ವಿಭಾಗದ ಅಧಿಕಾರಿ/ಸಿಬ್ಬಂದಿಯವರು ತಪಾಸಣೆ ಮಾಡಿ ಸಲ್ಲಿಸಿರುವ ವರದಿಯಲ್ಲಿನ ಅಂಶಗಳಿಗೆ ಸಂಸ್ಥೆಯು ಅನುಸರಣಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಹಲವಾರು ಅಂಶಗಳು ಹಣಕಾಸಿನ ವ್ಯತ್ಯಾಸಗಳನ್ನು ಗುರುತಿಸಿದ್ದು, ಸಂಸ್ಥೆಯು

ಮುಂದುವರೆದಿದೆ

ಮುಂದೆ ಸರಿಪಡಿಸಿಕೊಳ್ಳಲಾಗುವುದು ಎಂಬುದಾಗಿ ಉತ್ತರ ನೀಡಿದೆ. ಆದರೆ ಈ ರೀತಿಯ ಲೋಪಗಳುಂಟಾಗದಂತೆ ಎಚ್ಚರಿಕೆ ವಹಿಸದಿರುವುದಕ್ಕೆ ಸೂಕ್ತವಾದ ಕಾರಣಗಳನ್ನು ನೀಡಿರುವುದಿಲ್ಲ. ವೇತನ ಬಟವಡೆಗೆ ಸಂಬಂಧಿಸಿದಂತೆ ರೂ.3,19,579–00ಗಳು ಕಡಿಮೆ ಬಟವಡೆಯಾಗಿರುವುದಕ್ಕೆ ತಪಾಸಣಾ ಸಮಯದಲ್ಲಿ ಸರಿಯಾದ ಕಾರಣಗಳನ್ನು ವಿವರಿಸಿರುವುದಿಲ್ಲ.

ಸಂಸ್ಥೆಯ ಅಧ್ಯಕ್ಷರು ಸೆಕ್ಷನ್ 53ರಡಿ ವಿಚಾರಣೆ ನಡೆಸಬೇಕಾಗುತ್ತದೆಂದೂ, ಆದುದರಿಂದ ಸಂಸ್ಥೆ ವಿಚಾರಣೆಗೆ ಹಾಜರಾಗಲು ಸಿದ್ಧವಿದೆ ಎಚಿದೂ ತಿಳಿಸಿ, ದಾಖಲೆಗಳು ಮತ್ತು ಫೋಟೋಗಳನ್ನು ಹಾಜರುಪಡಿಸಲು ಅನುಮತಿ ಕೋರಿದ್ದಾರೆ. ಪ್ರಸ್ತುತ ಸಂಸ್ಥೆಗೆ ಸೂಚನಾ ಪತ್ರ ನೀಡಿ ಅವರ ಹೇಳಿಕೆ ಪಡೆದ ಕ್ರಮವು ಸೆಕ್ಷನ್ 53ರಡಿಯ ವಿಚಾರಣಾ ಕ್ರಮವೇ ಆಗಿರುತ್ತದೆ. ಖುದ್ದಾಗಿ ಹಾಜರಾಗಿ ವಾದ ಮಂಡಿಸಲು ಅವಕಾಶ ನೀಡುವುದು ಅಗತ್ಯವೆಂದು ಕಂಡುಬಂದಿರುವುದಿಲ್ಲ. ಈ ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ, ಸರ್ಕಾರವು, ಈ ಕೆಳಗಿನಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂ.ಇಡಿ 175 ಡಿಜಿಡಬ್ಲ್ಯೂ 2010, ಬೆಂಗಳೂರು, ದಿನಾಂಕ 02–07–2011</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಗವಾನ್ ಶಿಕ್ಷಣ ಟ್ರಸ್ಟ್, ಬೀದರ್ ಇವರ ವತಿಯಿಂದ ನಡೆಯುತ್ತಿದ್ದ ಎಐಎಂಇಎಸ್ ಪದವಿ ಪೂರ್ವ ಕಾಲೇಜು, ಬೀದರ್ ಈ ಅನುದಾನಿತ ಪದವಿ ಪೂರ್ವ ಕಾಲೇಜಿನ ವೇತನಾನುದಾನವನ್ನು 1–4–2007ರಿಂದ ತಡೆ ಹಿಡಿದಿರುವ ಕ್ರಮವು ಸೂಕ್ತವಾಗಿದ್ದು, ಕರ್ನಾಟಕ ಶಿಕ್ಷಣ ಕಾಯ್ದೆ, 1983ರ ಕಲಂ 39 ಮತ್ತು 53ರನ್ವಯ ಈ ಕಾಲೇಜಿನ ಮಾನ್ಯತೆ ಮತ್ತು ಮಂಜೂರಾತಿಯನ್ನು ರದ್ದುಪಡಿಸಿ, ವೇತನಾನುದಾನವನ್ನು ಶಾಶ್ವತವಾಗಿ ರದ್ದುಪಡಿಸಿದೆ. ಸದರಿ ಕಾಲೇಜಿನ ಅರ್ಹ ಅನುದಾನಿತ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಹೆಚ್ಚುವರಿ ಎಂದು ಪರಿಗಣಿಸಿ ಇತರೆ ಅನುದಾನಿತ ಪದವಿ ಪೂರ್ವ ಕಾಲೇಜಿನ ಹುದ್ದೆಗಳಿಗೆ ಸ್ಥಳಾಂತರಿಸಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

2/07/11
(ಎಸ್.ಹೆಚ್.ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ ಶಿಕ್ಷಣ)

ಇವರಿಗೆ,

1. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
2. ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಗವಾನ್ ಎಜುಕೇಷನಲ್ ಟ್ರಸ್ಟ್, ನಂ.9–2–64, ಶಾಹ್‌ಗಂಜ್, ಬೀದರ್.
4. ಉಪ ನಿರ್ದೇಶಕರು, ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ, ಬೀದರ್.
5. ಶಾಖಾ ರಕ್ಷಿತ ಕಡತ/ಹೆಚ್ಚುವರಿ ಪ್ರತಿಗಳು

KK-